(ಇಂದು ದಿನಾಂಕಃ 27-01-2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ  ಬೋಧಿಸಲಾಯಿತು.)

**ಪಾಟೀ ಸವಾಲುಃ 1 ರಿಂದ 12 ನೇ ಪ್ರತಿವಾದಿಯರ ಪರಃ ಶ್ರೀ ಆರ್.ವಿ.ಬಿ. ವಕೀಲರಿಂದಃ**

ತಿಮ್ಮಾ ಗೌಡ ಮತ್ತು ದಾನು ಗೌಡ ಸಹೋದರರು ಎಂದರೆ ಸರಿ. ಸದರಿಯವರು ಬೇರೆ ಬೇರೆಯಾಗಿ ವಾಸವಾಗಿದ್ದರು ಎಂದರೆ ಸರಿ. ದಾವಾ ಸ್ವತ್ತುಗಳನ್ನು ತಿಮ್ಮಾ ಗೌಡ ಇವರು ಸಾಗುವಳಿ ಮಾಡುತ್ತಿದ್ದು ಅವರೇ ಭೂನ್ಯಾಯಮಂಡಳಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಆದ್ದರಿಂದ ದಾನು ಗೌಡ

ಮತ್ತು ಆತನ ಕುಟುಂಬದವರಿಗೆ ದಾವಾ ಸ್ವತ್ತುಗಳಲ್ಲಿ ಹಕ್ಕು ಇಲ್ಲ ಎಂದರೆ ಸರಿ. ದಾನು ಗೌಡ ಇವರ ವಾರಿಸುದಾರರು ಈ ದಾವೆಯನ್ನು ಹಾಕಿದ್ದು ಅವರಿಗೆ ಯಾವುದೇ ಹಕ್ಕು ಬರುವುದಿಲ್ಲ ಎಂದರೆ ಸರಿ. ತಿಮ್ಮಾ ಗೌಡ ನಮ್ಮ ತಾಯಿಯ ತಂದೆ ಎಂದರೆ ಸರಿ.

ನಮ್ಮ ತಾಯಿಯ ಮದುವೆ ಯಾವ ವರ್ಷದಲ್ಲಿ ಆಗಿದೆ ಎಂದು ನನಗೆ ಗೊತ್ತಿಲ್ಲ. 7 ನೇ ಪ್ರತಿವಾದಿ ನಮ್ಮ ತಾಯಿಯ ತಮ್ಮ. ಮದುವೆ ಸಮಯದಲ್ಲಿ ನಮ್ಮ ತಾಯಿಯ ತಂದೆ ಮತ್ತು ನಮ್ಮ ತಾಯಿಯ ಸಹೋದರರು ಎಷ್ಟು ಬಂಗಾರವನ್ನು ಮತ್ತು ವರದಕ್ಷಿಣೆಯನ್ನು ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಮ್ಮ ತಾಯಿ ಮೃತಪಟ್ಟು 15 ವರ್ಷಗಳಾಗಿವೆ. ದಾವಾ ಸ್ವತ್ತುಗಳಲ್ಲಿ ಕೆಲವೊಂದು ಆಸ್ತಿಗಳು ಕೊಂಕಣ ರೈಲ್ವೆಗೆ ಸಂಬಂಧಿಸಿದಂತೆ ಭೂಸ್ವಾಧೀನಗೊಂಡಿದ್ದು ಅದಕ್ಕೆ ಸಂಬಂಧಪಟ್ಟಂತೆ 1995 ಮತ್ತು ಅದಕ್ಕಿಂತ ಮುಂಚೆ ಬಟವಡೆಯಾಗಿದೆ ಎಂದರೆ ಸರಿ. 1995 ರಲ್ಲಿ ನಮ್ಮ ತಾಯಿ ಜೀವಿತವಾಗಿದ್ದರು ಎಂದರೆ ಸರಿ. ಆ ಸಮಯದಲ್ಲಿ ನಮ್ಮ ತಾಯಿ ಮತ್ತು ಅವರ ಸಹೋದರರ ಸಂಬಂಧ ಚೆನ್ನಾಗಿತ್ತು ಎಂದರೆ ಸರಿ. ನಮ್ಮ ತಾಯಿ ಜೀವಿತವಿದ್ದಾಗ ತನಗೆ ಭಾಗವನ್ನು ಕೊಟ್ಟಿಲ್ಲ ಮತ್ತು ಪರಿಹಾರ ಧನದಲ್ಲಿ ಭಾಗ ಕೊಟ್ಟಿಲ್ಲ ಎಂದು ಹೇಳಿ ದಾವೆಯನ್ನು ಹಾಕಿರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವರ ತಮ್ಮ ಕೊಡುತ್ತಾನೆ ಎಂದು ಸುಮ್ಮನೆ ಇದ್ದೆವು ಎಂದು ಹೇಳುತ್ತಾರೆ. ಪರಿಹಾರ ಧನದಲ್ಲಿ 7 ನೇ ಪ್ರತಿವಾದಿ ನಮ್ಮ ತಾಯಿಗೆ ಭಾಗ ಕೊಟ್ಟಿದ್ದರು ಎಂದರೆ ಸರಿಯಲ್ಲ. 7 ನೇ ಪ್ರತಿವಾದಿ ಮತ್ತು ಉಳಿದ ಸಹೋದರರು ನಮ್ಮ ತಾಯಿ ಮತ್ತು ನಮ್ಮ ಚಿಕ್ಕಮ್ಮಂದಿರಿಗೆ ಪರಿಹಾರ ಧನದಲ್ಲಿ ಹಣ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಪರಿಹಾರ ಧನದಲ್ಲಿ ಹಣ ಕೊಟ್ಟಿದ್ದರಿಂದ ನಮ್ಮ ತಾಯಿ ದಾವೆ ಹಾಕಿರಲಿಲ್ಲ ಅನ್ನುವುದು ಸರಿಯಲ್ಲ. ಇಲ್ಲಿಯವರೆಗೂ ನಾವೂ ಸಹಿತ ಭಾಗ ಕೇಳಿ ದಾವೆ ಹಾಕಿಲ್ಲ ಎಂದರೆ ಸರಿ. ಒಂದುವೇಳೆ ದಾನು ಗೌಡನ ವಾರಸುದಾರರು ದಾವೆ ಹಾಕಿರಲಿಲ್ಲ ಎಂದರೆ ನಾವು ನ್ಯಾಯಾಲಯಕ್ಕೆ ಬಂದು ದಾವೆ ಹಾಕುತ್ತಿರಲಿಲ್ಲ ಎಂದರೆ ಸರಿ. ನಮ್ಮ ತಾಯಿಯ ಮದುವೆಯ ಕಾಲಕ್ಕೆ ನಮ್ಮ ಅಜ್ಜ ಮತ್ತು

ನಮ್ಮ ತಾಯಿಯ ಸಹೋದರರ ಹಣ ಮತ್ತು ಬಂಗಾರ ಕೊಟ್ಟಿದ್ದರಿಂದ ಮತ್ತು ಪರಿಹಾರ ಧನದಲ್ಲಿ ಭಾಗ ಕೊಟ್ಟಿದ್ದರಿಂದ ನಮ್ಮ ತಾಯಿ ದಾವೆ ಹಾಕಿರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಮ್ಮ ತಾಯಿ ದಾವಾ ಸ್ವತ್ತುಗಳಲ್ಲಿ ತನಗೆ ಭಾಗ ಬೇಡ, ಸಹೋದರರಿಗೆ ಸ್ವತ್ತುಗಳು ಹೋಗಲಿ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ನಮ್ಮ ಅಜ್ಜ ಮೃತಪಟ್ಟ ನಂತರ ನಮ್ಮ ತಾಯಿಯ ಸಹೋದರರ ಹೆಸರು ಮಾತ್ರ ಕಂದಾಯ ದಾಖಲಾತಿಯಲ್ಲಿ ದಾಖಲಾಗಿದ್ದು ನಮ್ಮ ತಾಯಿ ಮತ್ತು ನಮ್ಮ ಚಿಕ್ಕಮ್ಮಂದಿರ ಹೆಸರು ದಾಖಲಾಗಿಲ್ಲ ಎಂದರೆ ಸರಿ. ನಮ್ಮ ಅಜ್ಜ ಮೃತಪಟ್ಟ ನಂತರ ಮೌಖಿಕ ಪಾಲು ವಿಭಾಗವಾಗಿದ್ದು, ನಮ್ಮ ತಾಯಿಗೆ ಮದುವೆ ಕಾಲಕ್ಕೆ ಹಣ, ಬಂಗಾರ ಕೊಟ್ಟಿದ್ದರಿಂದ ತನಗೆ ಯಾವುದೇ ಭಾಗ ಬೇಡ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ದಾನು ಗೌಡನ ವಾರಸುದಾರರು ದಾವೆ ಮಾಡಿದ್ದು ನಮಗೂ ಏನಾದರೂ ಭಾಗ ಸಿಗಬಹುದು ಎಂಬ ಉದ್ದೇಶದಿಂದ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಭೂಸ್ವಾಧೀನಗೊಂಡ ಜಮೀನಿಗೆ ಸಂಬಂಧಿಸಿದಂತೆ ಬಂದಂತಹ ಪರಿಹಾರ ಧನದಲ್ಲಿ ನಮ್ಮ ತಾಯಿಗೆ ಹಣ ಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಬಿ.ಕೆ.ಎನ್. ವಕೀಲರಿಂದಃ</u>**

ನಾನು 3 ನೇ ತರಗತಿಯವರೆಗೆ ಓದಿದ್ದೇನೆ. ನನಗೆ ಕನ್ನಡ ಓದಲು, ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಗಳನ್ನು ನಮ್ಮ ವಕೀಲರು ಬೆರಳಚ್ಚು ಮಾಡಿಸಿದ್ದಾರೆ. ಸದರಿ ಪ್ರಮಾಣಪತ್ರವನ್ನು ನನಗೆ ಓದಿ ಹೇಳಿದ್ದಾರೆ. ತಿಮ್ಮಾ ಗೌಡನ ಹೆಂಡತಿ ಸೋಮಿ ಇವರು ನನಗೆ ಅಜ್ಜಿಯಾಗಬೇಕು. ತಿಮ್ಮಾ ಗೌಡ ಮೃತಪಟ್ಟ ನಂತರ ಅವರ ಹೆಂಡತಿ ಸೋಮಿ ಇವರ ಹೆಸರಿನಲ್ಲಿ ಕಂದಾಯ ದಾಖಲಾತಿಗಳು ವರ್ಗಾವಣೆಗೊಂಡಿದ್ದವು ಎಂದರೆ ಸರಿ. ಸೋಮಿ ಇವರು ಮೃತಪಟ್ಟ ನಂತರ 7 ನೇ ಪ್ರತಿವಾದಿ ಯಾರಿಗೂ ಹೇಳದೇ ತನ್ನ ಹೆಸರಿನಲ್ಲಿ ಕಂದಾಯ ದಾಖಲಾತಿಗಳನ್ನು ಮಾಡಿಕೊಂಡಿದ್ದಾರೆ ಎಂದರೆ ಸರಿ. ದಾನು ಗೌಡ ಇವರನ್ನು 7 ನೇ ಪ್ರತಿವಾದಿ ಸಾಯಿಸಿದ್ದಾನೆ ಎಂದು

ಆತನ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿ ಜೈಲಿನಲ್ಲಿ ಇದ್ದರು ಎಂದರೆ ಸರಿ. ದಾನು ಗೌಡ ಇವರನ್ನು ಜಾಗೆಯಿಂದ ತೆಗೆದು ಹಾಕಬೇಕು ಎನ್ನುವ ಉದ್ದೇಶದಿಂದ ಘಟನೆ ನಡೆದಿತ್ತು ಎಂದರೆ ಸಾಕ್ಷಿ, ಆ ರೀತಿ ಹೇಳುತ್ತಾರೆ ಎಂದು ಹೇಳುತ್ತಾರೆ. ನಮ್ಮ ಕುಟುಂಬದಲ್ಲಿ ಪಾಲು ವಿಭಾಗ ಆಗಿಲ್ಲ. ದಾನು ಗೌಡನ ಮಕ್ಕಳ ಪರಿಚಯ ನನಗೆ ಇದೆ ಎಂದರೆ ಸರಿ. ಅವರವರ ಅನುಕೂಲಕ್ಕೆ ತಕ್ಕ ಹಾಗೆ ಮನೆಗಳನ್ನು ದಾವಾ ಸ್ವತ್ತಿನಲ್ಲಿ ಕಟ್ಟಿಕೊಂಡಿದ್ದಾರೆ ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ಕೆಲವೊಂದು ಆಸ್ತಿಗಳು ಕೊಂಕಣ ರೈಲ್ವೆಗೆ ಭೂಸ್ವಾಧಿನಗೊಂಡಿದೆ ಎಂದರೆ ಸರಿ. ಸದರಿ ಜಮೀನಿಗೆ ಸಂಬಂಧಪಟ್ಟಂತೆ ಬಂದಂತಹ ಪರಿಹಾರ ಧನ 7 ನೇ ಪ್ರತಿವಾದಿ ಒಬ್ಬರೇ ತೆಗೆದುಕೊಂಡಿದ್ದಾರೆ ಎಂದರೆ ಸಾಕ್ಷಿ ಅವರ ತಮ್ಮಂದಿರಿಗೆ ಸ್ವಲ್ಪ ಸ್ವಲ್ಪ ಹಣ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ನನ್ನ ಸಮಕ್ಷಮದಲ್ಲಿ ಅವರ ತಮ್ಮಂದಿರಿಗೆ ಹಣವನ್ನು ಕೊಟ್ಟಿಲ್ಲ. ಆ ರೀತಿ ಕೊಟ್ಟಿದ್ದೇನೆ ಎಂದು 7 ನೇ ಪ್ರತಿವಾದಿ ಹೇಳುತ್ತಾರೆ ಎಂದರೆ ಸರಿ. ಪರಿಹಾರ ಧನ ತೆಗೆದುಕೊಂಡ ನಂತರ 7 ನೇ ಪ್ರತಿವಾದಿ ತನ್ನ ಮಗನಿಗೆ ನೌಕರಿಯನ್ನು ಕೊಡಿಸಿದ್ದಾರೆ ಎಂದರೆ ಸರಿ. 7 ನೇ ಪ್ರತಿವಾದಿ ಯಾರಿಗೂ ಹೇಳದೇ ಗುಪ್ತವಾಗಿ ಪರಿಹಾರ ಧನ ಪಡೆದುಕೊಂಡಿದ್ದು ಮತ್ತು ತನ್ನ ಮಗನಿಗೆ ನೌಕರಿಯನ್ನು ಕೊಡಿಸಿದ್ದಾರೆ ಎಂದರೆ ಸರಿ. ದಾನು ಗೌಡನ ವಾರಸುದಾರರು ದಾವೆ ಹಾಕಿದ್ದು ಯಾವುದೇ ತೀರ್ಮಾನವಾಗದೇ ವಜಾಗೊಂಡಿದೆ ಎಂದರೆ ಸರಿ. ಅದನ್ನು ಪುನರ್ ಸ್ಥಾಪನೆಗಾಗಿ ಅರ್ಜಿಯನ್ನು ಸಲ್ಲಿಸಿದ್ದು ಆ ಸಮಯದಲ್ಲಿ 7 ನೇ ಪ್ರತಿವಾದಿ ಪರಿಹಾರ ಧನದಲ್ಲಿ ಹಣ ಕೊಡುತ್ತೇವೆ ಎಂದು ಹೇಳಿದ್ದರಿಂದ ಸದರಿ ಅರ್ಜಿಯನ್ನು ಹಿಂಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳಲ್ಲಿ ದಾನು ಗೌಡನ ವಾರಸುದಾರರಿಗೆ ಮತ್ತು ತಿಮ್ಮಾ ಗೌಡನ ವಾರಸುದಾರರಿಗೆ ಸಮನಾದ ಹಕ್ಕು ಇದೆ ಎಂದರೆ ಸರಿ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಕಾರವಾರ